**ದಿನಾಂಕ 30.09.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಮಾನ್ಯ ವಕೀಲರಿಂದ.**

ನನ್ನ ಮುಖ್ಯ ವಿಚಾರಣಾ ಸಾಕ್ಷ್ಯವನ್ನು ಪ್ರಮಾಣ ಪತ್ರದ ರೂಪದಲ್ಲಿ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಚಾರಗಳನ್ನು ನಾನೇ ಹೇಳಿ ಬರೆಯಿಸಿ ರುಜು ಮಾಡಿದ್ದು ಅದರಲ್ಲಿರುವ ವಿಚಾರಗಳು ಸತ್ಯವಾಗಿವೆ.

ಪ್ರಥಮ ವರ್ತಮಾನ ವರದಿಯ ದೃಢೀಕೃತ ಪ್ರತಿಯನ್ನು ನಿಪಿ **1** ಎಂದು, ದೂರಿನ ದೃಢೀಕೃತ ಪ್ರತಿಯನ್ನು ನಿಪಿ **2** ಎಂದು, ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುವ ಮನವಿಯ ಧೃಡಿಕೃತ ಪ್ರತಿಯನ್ನು ನಿಪಿ **3** ಎಂದು, ಸ್ಥಳ ಪಂಚನಾಮೆಯ ದೃಢೀಕೃತ ಪ್ರತಿಯನ್ನು ನಿಪಿ **4** ಎಂದು, ನಕ್ಷೆಯ ದೃಢೀಕೃತ ಪ್ರತಿಯನ್ನು ನಿಪಿ **5** ಎಂದು, ಐಎಮ್‌ವಿ ವರದಿಯ ದೃಢೀಕೃತ ಪ್ರತಿಯನ್ನು ನಿಪಿ **6** ಎಂದು, ಗಾಯದ ಪ್ರಮಾಣ ಪತ್ರದ ದೃಢೀಕೃತ ಪ್ರತಿಯನ್ನು ನಿಪಿ **7** ಎಂದು, ಡಿಸ್ಚಾರ್ಜ್ ಸಮರಿಗಳನ್ನು ಒಟ್ಟಾಗಿ ನಿಪಿ **8** ಎಂದು, ದೋಷಾರೋಪಣ ಪಟ್ಟಿಯ ದೃಢೀಕೃತ ಪ್ರತಿಯನ್ನು ನಿಪಿ **9** ಎಂದು, ಮೋಟಾರು ವಾಹನ ಕಯ್ದೆಯ ಕಲಂ 133 ರಡಿ ನೀಡಿರುವ ನೋಟೀಸು ಮತ್ತು ಸದರಿ ನೋಟೀಸಿಗೆ ನೀಡಿರುವ ಉತ್ತರದ ದೃಢೀಕೃತ ಪ್ರತಿಗಳನ್ನು ಕ್ರಮವಾಗಿ ನಿಪಿ **10** ಮತ್ತು **11** ಎಂದು, ವ್ಯಾಸಂಗ ಪ್ರಮಾಣ ಪತ್ರವನ್ನು ನಿಪಿ **12** ಎಂದು, ಮೆಡಿಕಲ್ ಬಿಲ್ಲುಗಳನ್ನು ನಿಪಿ **13** ಎಂದು, ಮುಂಗಡ ಪಾವತಿ ರಶೀದಿಗಳನ್ನು ಒಟ್ಟಾಗಿ ನಿಪಿ **14** ಎಂದು, ವೈದ್ಯರ ಸಲಹಾ ಚೀಟಿಗಳನ್ನು ನಿಪಿ **15** ಎಂದು, ಲ್ಯಾಬ್ ವರದಿಗಳನ್ನು ಒಟ್ಟಾಗಿ ನಿಪಿ **16** ಎಂದು, ಕ್ಷ-ಕಿರಣಗಳನ್ನು ಮತ್ತು ಸಿಟಿ ಸ್ಕ್ಯಾನ್ ಫೀಲಂ ಗಳನ್ನು ಒಟ್ಟಾಗಿ ನಿಪಿ **17** ಎಂದು, ಆಧಾರ್ ಕಾರ್ಡ್ ಗಳ ನೋಟರಿ ಪ್ರತಿ(ಮೂಲ

ದಾಖಲಾತಿಗಳೊಂದಿಗೆ ಹೋಲಿಕೆ ಮಾಡಿ ಮೂಲ ದಾಖಲಾತಿಗಳನ್ನು ಹಿಂದಿರುಗಿಸಲಾಯಿತು)ಗಳನ್ನು ಒಟ್ಟಾಗಿ **ನಿಪಿ 18** ಎಂದು, 4 ಛಾಯಾ ಚಿತ್ರಗಳನ್ನು ಮತ್ತು ಸಿಡಿಯನ್ನು ಒಟ್ಟಾಗಿ ನಿಪಿ **19** ಎಂದು ಗುರುತಿಸಲಾಯಿತು.

1 ಮತ್ತು 2 ನೇ ಎದುರುದಾರರ ಪರ ಮಾನ್ಯ ವಕೀಲರು ಪ್ರತಿವಾದ ಪತ್ರ ಸಲ್ಲಿಸದಿರುವುದರಿಂದ ಪಾಟೀ ಸವಾಲು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**1** ನೇ ಎಸ್‌ಸಿಜೆ ಮತ್ತು ಎಸಿಜೆಎಮ್

ಬೆಂಗಳೂರು